## 45

# ಯಾವಾಗ ಸಂಪ್ರದಾಯವು ಕೆಟ್ಟದಾಗಿರುತ್ತದೆ?

## ಮತ್ತಾಯ 15:7-20; ಮಾರ್ಕ 7:6-8, 14-23, ಒಂದು ನಿಕಟ ನೋಟ

ಹಿಂದಿನ ಪ್ರಸಂಗದಲ್ಲಿ, "ಸಂಪ್ರದಾಯ" ಇದರ ಮೂಲ ಅರ್ಥವು ಹಸ್ತಾಂತರಿಸುವಂಥದ್ದು ಎಂದು ನಾವು ಕಲಿತೆವು. ಇದು ದೇವರಿಂದ ಕೊಡಲ್ಪಟ್ಟದ್ದನ್ನು ಸೂಚಿಸದಾಗಿದ್ದರೂ, ಸಾಮಾನ್ಯವಾಗಿ ಮಾನವರಿಂದ ಕೊಡಲ್ಪಟ್ಟದ್ದನ್ನು ಇದು ಸೂಚಿಸುವಂಥದ್ದಾಗಿದೆ. ಮಾನವನೊಂದಿಗೆ ಮೂಲವಾದಂಥ ಸಂಪ್ರದಾಯಗಳು ತಂತಾನೇ ಇದನ್ನು ಕೆಟ್ಟವುಗ ಳನ್ನಾಗಿ ಮಾಡಲಾರವು ಎಂಬುದು ಸತ್ಯ ಎಂದು ನಾವು ಒತ್ತಿ ಹೇಳುವವರಾಗಿದ್ದೇವೆ. ಹೇಗೋ ಮತ್ತಾಯ 15 ಮತ್ತು ಮಾರ್ಕ 7ರಲ್ಲಿನ, ಯೇಸುವಿನ ದೃಢವಾದ ಮಾತುಗಳು ಮಾನವ ನಿರ್ಮಿತ ಸಂಪ್ರದಾಯಗಳು ತಪ್ಪಾಗಿರಬಹುದು, ಬಲು ತಪ್ಪಾಗಿರಬಹುದು ಎಂಬುದರಲ್ಲಿ ಯಾವುದೇ ಸಂಶಯವನ್ನು ಇಡದವುಗಳು ಆಗಿವೆ. ಸಂಪ್ರದಾಯವು ಕೆಟ್ಟದಾದಾಗ ಎಂಬುದನ್ನು ಅರಿತುಕೊಳ್ಳಲು ಕನಿಷ್ಟಪಕ್ಷ ಮೂರು ಪರಿಣಾಮಗಳನ್ನು ನಮ್ಮ ಅಧ್ಯಯನವು ಸೂಚಿಸುವುದಾಗಿದೆ. ನಾವು ಮೊದಲು ಚರ್ಚಿಸಿದಂತೆ: *ದೇವರ ನಿಖರವಾದ ಆಜ್ಞೆಯು ಉಲ್ಲಂಘಿಸಲ್ಪಟ್ಟಾಗ ಒಂದು ಸಂಪ್ರದಾಯವು ಕೆಟ್ಟದಾಗುತ್ತದೆ.*[1] ನಾವು ಇತರೆ ಎರಡನ್ನು ಈ ಮಂಡನೆಯಲ್ಲಿ ಪರೀಕ್ಷಿಸುವಾ. ನಾವು ಹಾಗೆ ಮಾಡುತ್ತಿದ್ದಂತೆ ನಮ್ಮಲ್ಲಿ ಪ್ರತಿಯೊಬ್ಬರೂ ತನ್ನನ್ನು ತಾನೇ ಪರೀಕ್ಷಿಸಿಕೊಳ್ಳಲಿ (2 ಕೊರಿಂಥ 13:5)!

### ಬೇರೆಯರನ್ನು ಒಳಗೊಂಡಾಗ ಸಂಪ್ರದಾಯವು[2] ಕೆಟ್ಟದ್ದಾಗಿರುತ್ತದೆ (ಮತ್ತಾಯ 15:7-9ಣಿ ಮಾರ್ಕ 7:6-8)

ಕ್ರಿಸ್ತನು ಫರಿಸಾಯರೊಂದಿಗೆ ಮಾತನಾಡುತ್ತಿರುವಾಗ, ಆತನ ಮಾತುಗಳು ಬಲು ನಿಶ್ಚಿತವಾಗಿದ್ದವು: "ಕಪಟಿಗಳೇ ನಿಮ್ಮ ವಿಷಯದಲ್ಲಿ ಯೆಶಾಯನು ವಿಹಿತವಾಗಿ ಪ್ರವಾದಿ ಸಿದ್ದಾನೆ; ಅವನು ಬರದದ್ದೇನೆಂದರೆ ಈ ಜನರು ಮಾತಿನಿಂದ ನನ್ನನ್ನು ಸನ್ಮಾನಿಸುತ್ತಾರೆ, ಆದರೆ ಅವರ ಮನಸ್ಸು ನನಗೆ ದೂರವಾಗಿದೆ. ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು ಬೋಧಿಸುವುದರಿಂದ ನನಗೆ ಭಕ್ತಿ ತೋರಿಸುವದು ವ್ಯರ್ಥ ಎಂಬುದೆ" (ಮತ್ತಾಯ 15:7-9). ಈ ವ್ಯಾಖೆಯು ಯೆಶಾಯ 29:13ರಲ್ಲಿ ಇರುವುದಾಗಿದೆ. ಈ ಪರಿಚ್ಛೇದದಲ್ಲಿ, ಪ್ರವಾದಿಯು ತನ್ನ ದಿನದಲ್ಲಿನ ಕಪಟಿಗಳನ್ನು ಖಂಡಿಸುತ್ತಿದ್ದಾನೆ. ಈ ದೈವಪ್ರೇರೇಪಿತ ನುಡಿಗಳು ತನ್ನ ದಿನದಲ್ಲಿನ ನಾಯಕರಿಗೆ ಅನ್ವಯವಾಗುವಂತವುಗಳಾಗಿವೆ ಎಂದು ಯೇಸು ಹೇಳುತ್ತಾನೆ.

ಯೆಶಾಯನ ಮಾತುಗಳಿಂದ ಮಹತ್ವವಾದ ಪಾಠಗಳನ್ನು ತೆಗೆದುಕೊಳ್ಳಬಹುದು. "ಮಾತುಗಳ ಸೇವೆಯು ಸಾಲದು; ಕರ್ತನಿಗಾಗಿ ನಮ್ಮ ವಿಧೇಯತೆಯು ಹೃದಯದಿಂದ ಬರಬೇಕು" (ಮತ್ತಾಯ 22:37; ರೋಮಾಪುರ 6:17; ಎಫೆಸ 6:6; ಕೊಲೊಸ್ಸೆ 3:16; 2 ಕೊರಿಂಥ 9:7). ನಮ್ಮ ಆರಾಧನೆಯು ಹೃದಯದಿಂದ ಪ್ರೇರೇಪಿತವಾದದ್ದು ಮತ್ತು ಪರ ಲೋಕದಿಂದ ಅಧಿಕೃತವೂ ಆಗದೇ ಹೋದರೆ ಅದು "ನಿರರ್ಥಕ" (ಖಾಲಿ)[3] ವಾದದ್ದಾಗಿದೆ ಎಂಬುದನ್ನು ನಾವು ನೋಡಿದ್ದೇವೆ. ನಮ್ಮ ಪ್ರಸ್ತುತ ಚರ್ಚೆಯಲ್ಲಿ, ನಾನು ವ್ಯಾಖೆಯ ಅಂತಿಮ ಭಾಗವಾದ ಮನುಷ್ಯರು ಕಟ್ಟಿದ ಕಟ್ಟಳೆಗಳನ್ನೇ ಅವರು ಬೋಧಿಸುವುದರಿಂದ ಎಂಬುದರ

ಮೇಲೆ ಕೇಂದ್ರೀಕರಿಸುವವನಾಗಿದ್ದೇನೆ. ನಮ್ಮ ಪ್ರಸ್ತುತ ಚರ್ಚೆಯಲ್ಲಿ, ವ್ಯಾಖ್ಯೆಯ ಅಂತಿಮ ಭಾಗವಾದ ಅವರು "ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಬೋಧಿಸುವರು" ಎಂಬುದರ ಮೇಲೆ ನಾವು ಕೇಂದ್ರಿ ಕರಿಸುವವರಾಗಿರಬೇಕೆಂದು ನಾನು ಬಯಸುವನಾಗಿದ್ದೇನೆ. ಅವರು ತಮ್ಮ "ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನು" *ದೇವರ* ಕಟ್ಟಳೆಗಳೇ ಎಂಬಂತೆ ಬೋಧಿಸುವವರಾಗಿದ್ದರು ಎಂದು ಈ ಭಾಗವು ಸ್ಪಷ್ಟಪಡಿಸುವುದಾಗಿದೆ. ಫರಿಸಾಯರಿಗೆ ಸಂಪ್ರದಾಯಗಳು ಎಷ್ಟು ಮಹತ್ವವಾದವುಗಳು ಆಗಿದ್ದವೆಂದರೆ, ಅವುಗಳು *ಮನುಷ್ಯರಿಗೋಸ್ಕರ* ಕಾವಲು ಕಾಯುವಂತವುಗಳು ಆಗಿದ್ದವೇ ಹೊರತು ದೇವರಿಗೆ ಅಲ್ಲ ಎಂದು ಯೇಸು ಅರಿತುಕೊಳ್ಳಬಯಸಿದ್ದನು.

**ಆಜ್ಞೆಗಳೋ ಎಂಬಂತೆ ಬಂಧಿಸಲ್ಪಟ್ಟ ಸಂಪ್ರದಾಯಗಳು**

ಪ್ರತಿಯೊಂದು ಊಟಕ್ಕಿಂತ ಮೊದಲು ಸವಿಸ್ತಾರವಾದ ಶುದ್ಧಿಕರಣದ ಮೂಲಕ ಹೋಗುವುದಕ್ಕಾಗಿ ಯೇಸು ಫರಿಸಾಯರನ್ನು ಖಂಡಿಸಿದನೇ? ಇಲ್ಲ. ವಿಧಿಗಳನ್ನು ಆಚರಿಸುವುದರ ಮೂಲಕ ಅವರು ತಮ್ಮ ಸಮಯವನ್ನು ಹಾಳು ಮಾಡಿಕೊಳ್ಳುವದಾದರೆ, ಅದು ಅವರಿಗೆ ಸಂಬಂಧಿಸಿದ ಸಂಗತಿ. ಅವರ ಈ ಅಭ್ಯಾಸಕ್ಕಾಗಿ ಫರಿಸಾಯರಿಗೋಸ್ಕರ ಯೇಸುವಿನ ಆರೋಪವಿರಲಿಲ್ಲ, ಆದರೆ ಅವರು ತಮ್ಮ ಈ ನಿರ್ಭಂದಗಳನ್ನು ಇತರರ ಮೇಲೆ ಹೊರಿಸುವವರಾಗಿದ್ದರು ಅದಕ್ಕಾಗಿಯೇ. ಅವರು ತಮ್ಮ ಸಂಪ್ರದಾಯಗಳನ್ನು ದೇವರ ಆಜ್ಞೆಯ ಮಟ್ಟದಲ್ಲಿ ಉನ್ನತ ಮಟ್ಟದಲ್ಲಿ ಇರಿಸಿದ್ದರು. ಜನರು ತಮ್ಮ ಸಂಪ್ರದಾಯಗಳನ್ನು ಪಾಲಿಸಬೇಕೆಂದು ಅವರು ಕಲಿಸುವವರಾಗಿದ್ದರು. ಅದನ್ನು ಕೈಕೊಳ್ಳುವುದರಲ್ಲಿ ವಿಫಲರಾದ ವರನ್ನು ಅವರು ದೂಷಿಸುವವರಾಗಿದ್ದರು. ಎರಡನೆಯ ಮಟ್ಟವನ್ನು ನಾವು ಈ ರೀತಿಯಲ್ಲಿ ಹೇಳಬಹುದು: *ಸಂಪ್ರದಾಯವು ಇತರರ ಮೇಲೆ ಹೊರೆಸಿದಾಗ ಅದು ಕೆಟ್ಟದ್ದಾಗುತ್ತದೆ.*

ಅಂಥ ಅಭ್ಯಾಸವು ದೋಷಯುಕ್ತವಾಗಿರುತ್ತದೆ, ತತ್ವದ ಮಟ್ಟಿಗಾದರೂ ತಪ್ಪಾಗಿರುತ್ತದೆ ಎಂದು ಪ್ರತಿಯೊಬ್ಬರೂ ನೋಡಬಹುದಾಗಿದೆ. ವರ್ಷಗಳಿಂದಲೂ, ರಜಾದಿನಗಳಿಗಾಗಿ ಮತ್ತು ಇತರ ಆಚರಣೆಗಳಿಗಾಗಿ ನನ್ನ ಕುಟುಂಬವು ತನ್ನದೇ ಆದ ಅನ್ಯೋನ್ಯತೆಯನ್ನು (ವಿಶಿಷ್ಟತೆ?) ಬೆಳಸಿಕೊಂಡು ಬಂದಿದೆ. ಅವುಗಳಲ್ಲಿ ನಾವು ಆನಂದಿಸುತ್ತೇವೆ, ಅವುಗಳು ಯಾರಾಗಿದ್ದೇವೆ ಎಂದು ವ್ಯಾಖ್ಯಾನಿಸಲು ಸಹಾಯಿಸುವವುಗಳಾಗಿವೆ. ಹೇಗೋ ಅವುಗಳನ್ನು ನಾವು ಇತರರ ಮೇಲೆ ಹೊರೆಸಲು ನಾವು ಯತ್ನಿಸುತ್ತಿಲ್ಲ. ನಮ್ಮ ಕುಟುಂಬದ ಸಂಪ್ರದಾಯಗಳನ್ನು ನಡೆಸದಿರುವುದಕ್ಕಾಗಿ ಇತರರಿಗೆ ಸಂಬಂಧಿಸಿದ ಸಂಗತಿಗಳನ್ನು ದೋಷಿಸುವುದರಿಂದ ಅವುಗಳು ಹೇಳುವುದಕ್ಕೂ ಕೂಡಾ ಹಾಸ್ಯಸ್ಪದವಾಗಬಹುದು.

ಧಾರ್ಮಿಕ ಸಂಪ್ರದಾಯಗಳನ್ನು ಇತರರ ಮೇಲೆ ಹೊರೆಸುವದು ತಪ್ಪು ಎಂದು ಯೇಸು ಸ್ಪಷ್ಟವಾಗಿ ಬೋಧಿಸಿದನು. ಈ ತತ್ವವನ್ನು *ಅನ್ವಯಿಸಲು* ನಾವು ಯತ್ನಿಸಿದಾಗ ಆ ವಿವಾದ ಗಳು ಉದ್ಭವಿಸುತ್ತವೆ. ಜನರು ಸ್ವಾಭಾವಿಕವಾಗಿ "ಈಗಾಗಲೇ ಆಗಿ ಹೋದ ಮಾರ್ಗದಲ್ಲಿ" ಹೆಚ್ಚು ಹಾಯಾಗಿ ಇರುವವರಾಗಿದ್ದಾರೆ ಮತ್ತು ಇದು ಮಾಡಲ್ಪಡಲು ಇದೇ ಮಾರ್ಗ ಎಂಬುದರೆ ಡೆಗೆವಾಲಲು ನಾವು ಯೋಚಿಸುವವರಾಗಿದ್ದೇವೆ. ಅದಲ್ಲದೆ, ಯಾವುದು ಬದಲಾಗುವುದಿಲ್ಲವೋ (ಪ್ರಕಟಿಸಬೇಕಾದ ದೇವರ ಚಿತ್ತ) ಮತ್ತು ಯಾವುದು ಮಾಡಲ್ಪಡುವದೋ (ಆತನ ಚಿತ್ತವನ್ನು ನೆರವೇರಿಸಲು ಉಪಯೋಗಿಸಲ್ಪಡುವ ವಿಧಾನ) ಇವುಗಳ ಮಧ್ಯೆ ಭಿನ್ನತೆಯನ್ನು ಮಾಡಲು ನಾವು ಸೆಣಸಬೇಕಾಗುತ್ತದೆ.

ದೃಷ್ಟಾಂತಗಳು ಆರಾಧನೆಯ ವರ್ತುಲದಿಂದ ಮನದಲ್ಲಿ ಬರುವವುಗಳು ಆಗಿವೆ:[4] ನಾನು ಬೋಧಿಸುವ ಅನೇಕ ಸಭೆಗಳು ಸಂಗೀತ ಪುಸ್ತಕವನ್ನು ಹೊಂದಿವೆ. ಆದ್ದರಿಂದ ಸ್ಕ್ರೀನ್ ಮೇಲೆ ಇರುವ ಹಾಡುಗಳ ಯೋಜನೆಗಾಗಿ ನಾವು ಆ ಸಭೆಯನ್ನು ನಿಂದಿಸೋಣವೇ?[5] ನಾನು ಎಲ್ಲೆಲ್ಲಿ ಆರಾಧನೆಯನ್ನು ನಡೆಸಿದ್ದೇನೆಯೋ, ಅದು ಸಾಮಾನ್ಯವಾಗಿ ಇರುವಂತಹ

ಭಾನುವಾರದ ಮುಂಜಾನೆಯ ಆರಾಧನಾ ಸಭೆಯಂತೆ ಆಗಿರುವುದಾಗಿದೆ. ಭಾನುವಾರದ ಮುಂಜಾನೆಯ ಆರಾಧನೆಯು ಮೂಲತವಾಗಿ ಸಂಗೀತ, ಪ್ರಾರ್ಥನೆ, ಮತ್ತು ಕರ್ತನ ಭೋಜನ ಸಂಸ್ಕಾರದ ಆಚರಣೆಯ ಮೇಲೆ ಕೇಂದ್ರಿಕೃತವಾದ ದೇವರ ವಾಕ್ಯ ಓದವಿಕೆಯ ಮೇಲೆ ಇರುವುದು ತಪ್ಪೋ?[6] ನಾನು ಸಹಯೋಗವನ್ನು ಹೊಂದಿದಂತಹ ಸಭೆಯು ಭಾನುವಾರ ರಾತ್ರಿಯ ಆರಾಧನೆಯನ್ನು ಚರ್ಚಿನ ಕಟ್ಟಡದಲ್ಲಿ ಹೊಂದಿರುವುದಾಗಿದೆ. ಇನ್ನೊಂದು ಸಭೆಯು ಭಾನುವಾರ ಸಂಜೆಯ ಆರಾಧನೆಯನ್ನು ಮನೆಯಲ್ಲಿ ಇರಿಸಲು ನಿಶ್ಚಯಿಸಿದ್ದರೆ, ಅದು ದೇವವಾಕ್ಯಕ್ಕೆ ವಿರುದ್ಧವಾಗುತ್ತದೆಯೋ?[7] "ಇದು ಪ್ರಾಯೋಗಿಕವಾದ ದ್ದಲ್ಲವೇ?" ಎಂದು ನಾನು ಕೇಳುತ್ತಿಲ್ಲ, ನಾನು "ದೇವವಾಕ್ಯಕ್ಕೆ ವಿರುದ್ಧವಾಗುತ್ತದೆಯೋ?" ಎಂದು ಕೇಳುತ್ತಿದ್ದೇನೆ.

ಹೊಸ ಒಡಂಬಡಿಕೆಯು ಆರಾಧನೆಯ ಮೂಲ ವಿಧವನ್ನು ನಮಗೆ ಕೊಟ್ಟಿದೆ, ಆದರೆ ಅನೇಕ ವಿವರಣೆಗಳು ನಮ್ಮ ತೀರ್ಪಿಗೆ ಬಿಟ್ಟವುಗಳು ಆಗಿವೆ. ವರ್ಷದುದ್ದಕ್ಕೂ, ದೇವರ ವಾಕ್ಯದ ಅವಶ್ಯಕತೆಗಳು ಸಂಪೂರ್ಣಗೊಳಿಸುವುದಕ್ಕೋಸ್ಕರ ಅನುಕೂಲವಾಗುವಂತೆ ಸಭೆಯು ಅಭಿವೃದ್ಧಿಯ ಬಳಿಸಾಗಲು ಗಮನಹರಿಸುವುದಾಗಿದೆ. ಇದರೊಡನೆ ಯಾವ ತಪ್ಪು ಇಲ್ಲ, ಆದರೆ ಯಾವುದು ದೇವರಿಂದ ತೆಗೆದುಕೊಳ್ಳಲ್ಪಟ್ಟಿದೆಯೋ (ದಿವ್ಯ ವಿಧ) ಮತ್ತು ಮನುಷ್ಯರಿಂದ (ದಿವ್ಯ ವಿಧವನ್ನು ತೆಗೆದುಕೊಳ್ಳುವುದರಲ್ಲಿ ಇರುವ ನಮ್ಮ ವಿಧಾನಗಳೂ) ಯಾವುದು ತೆಗೆದುಕೊಳ್ಳ ಲ್ಪಟ್ಟಿದೆಯೋ ಅದರ ಮಧ್ಯೆ ಭಿನ್ನತೆಯನ್ನು ಮಾಡುವುದರಲ್ಲಿ ನಾವು ಕಾಳಜಿವಹಿಸಬೇಕು.[8]

ನನ್ನ ಕುಟುಂಬವು ಪಶ್ಚಿಮ ಭಾಗದ ಚರ್ಚಿನೊಡನೆ ಕೆಲಸಮಾಡುತ್ತಿದ್ದಾಗ, ಆರಾ ಧನಾ ಸೇವೆಯ ಕ್ರಮವನ್ನು ಕೆಲಸಾರಿ ಮಿಶ್ರಮಾಡುವಂಥ ಚಾರ್ಲ್ಸ್ ಕೆಲ್ಲೆ ಎಂಬ ಸಂಗೀತ ನಾಯಕನನ್ನು ನಾವು ಹೊಂದಿದ್ದೆವು. ಉದಾಹರಣೆಗೆ, ನಾವು ಆರಾಧನೆಯ ಮೊದಲಲ್ಲಿ ಅಥವಾ ಕೊನೆಯಲ್ಲಿ ರಾತ್ರಿಭೋಜನ ಸಂಸ್ಕಾರವನ್ನು ಹೊಂದಿರಬಹುದು. ಸಾಂಧರ್ಭಿಕ ವಾಗಿ, ವಿಭಿನ್ನ ಸಮಯದಲ್ಲಿನ ಕಾಣಿಕೆಗಿಂತಲೂ ಕರ್ತನ ಭೋಜನವಾಗಲಿ ಅಲ್ಲದೆ ರಾತ್ರಿಭೋಜನದ ನಂತರ ತಕ್ಷಣವೇ ಹೊಂದುವ ವಿಧಿಯ ಯಾದಿಯನ್ನು ಆತನು ಮಾಡುತ್ತಿದ್ದನು.[9] ಒಂದು ಭಾನುವಾರ ಬೆಳಗ್ಗೆ ಕರ್ತನ ಭೋಜನದ ನಂತರ ಸಂಗ್ರಹವಾ ದದ್ದು ತೆಗೆದುಕೊಳ್ಳಲ್ಪಡಲಿಲ್ಲ, ಒಬ್ಬ ಸಂದರ್ಶಕಿ ನೆಗೆದು ಎದ್ದಳು ಮತ್ತು ಆರಾಧನೆಯಿಂದ ಆವಸರಿಸಿದಳು. ಅವಳು ಕಟ್ಟಡದಿಂದ ಬಿಟ್ಟು ಹೋದಂತೆಯೇ, ಪ್ರವೇಶಕೊಠಡಿಯಲ್ಲಿನ ವ್ಯಕ್ತಿಗೆ "ಎಂಥ ಆರಾಧನಾ ಗುಂಪಿನಲ್ಲಿ ನಾನು ಆರಾಧಿಸುತ್ತಿದ್ದೇನೆ?" ಎಂದು ಉದ್ಗಾರ ತೆಗೆದಳು. ಪ್ರತ್ಯಕ್ಷವಾಗಿ ಅಲ್ಲಿ "ಸತ್ಯವೇದ ದೃಷ್ಟಿಯಿಂದ ಒಂದು ಆರಾಧನಾ ಕ್ರಮವಿದೆ"[10] ಎಂದೂ ಮತ್ತು ಅಲ್ಲಿರುವ ಯಾವುದೇ ಬದಲಾವಣೆಯು "ದೇವವಾಕ್ಯಕ್ಕೆ ವಿರುದ್ಧವಾಗಿದೆ" ಎದು ಆಕೆಯು ನಂಬಿದ್ದಳು.

ಈ ಮೂಲ ತತ್ವಗಳನ್ನು ನಾನು ಹೆಚ್ಚಾಗಿ ಒತ್ತಿಹೇಳಲಾರೆನು: ದೇವರ ಆಜ್ಞೆಗಳು ಮತ್ತು ಮಾನವನ ಸಂಪ್ರದಾಯಗಳ ಮಧ್ಯೆ ಭಿನ್ನತೆಯು ಇರುವದು ಅದು ಅವಶ್ಯವಾಗಿದೆ; ಮಾನವ ನಿರ್ಮಿತ ಸಂಪ್ರದಾಯಗಳನ್ನು ಇತರರ ಮೇಲೆ ಹೊರೆಸುವದು ತಪ್ಪು. ಗರ್ವದಿಂದ ಹೀಗೆಯೇ ನಾವು ಒಪ್ಪಿಸಿಬಿಡಬಹುದು, ಮುಖ್ಯವಾದ ಪ್ರಶ್ನೆಯು "ನಾವು ದೇವರ ಆಜ್ಞೆಗಳು ಮತ್ತು ಮಾನವನ ಸಂಪ್ರದಾಯಗಳ ಮಧ್ಯ ಹೇಗೆ ಭಿನ್ನತೆಯನ್ನು ಮಾಡಬಹುದು?"

## ದೇವರ ಆಜ್ಞೆಗಳು ಮತ್ತು ಮಾನವನ ಸಂಪ್ರದಾಯಗಳ ಮಧ್ಯೆ ಭಿನ್ನತೆ

ಹೆಚ್ಚು ಹೆಚ್ಚಾಗಿ, ನಾವು ಕೇಳುವಂತಹ "ಸಂಪ್ರದಾಯ" ಎಂಬ ಪದವು ಹಳೆಯದು ಮತ್ತು ಕೆಲಸಕ್ಕೆ ಬಾರದು, ಯಾವುದೇ ಮಹತ್ವವಿಲ್ಲದ್ದು, ಮತ್ತು ಈ ಕಾರಣ ಉದ್ದೇಶಾರ್ಥದೊಡನೆ ಇರುವಂಥದ್ದು, ಪ್ರತ್ಯಾರೋಪಣೆಯ ಜೊತೆ ಹೊರಕ್ಕೆ ಎಸೆಯಲ್ಪಟ್ಟದ್ದು ಎಂಬ ಸುತ್ತಲಿರುವ ಯಾವುದಕ್ಕಾದರೂ ಒಂದು ಕ್ಷಣಕ್ಕೆ ಅನ್ವಯವಾಗುವಂತಹದ್ದಾಗಿದೆ. ಉದಾಹರಣೆಗೆ,

ನಾನು "ಸಾಂಪ್ರದಾಯಿಕ ಕುಟುಂಬ"[11] (ಆ ಕುಟಂಬವು ತಂದೆ ತಾಯಿ ಮತ್ತು ಅವರ ಮಕ್ಕಳನ್ನು ಹೊಂದಿರುವುದು ಆಗಿದೆ) ಎಂಬ ಪದವನ್ನು ಅವಮಾನಿಸುವ ರೀತಿಯಲ್ಲಿ ಬಳಸುವದನ್ನು ಕೇಳಿದ್ದೇನೆ. ಬೈಬಲ್‌ನ್ನು ನಂಬುವವರಿಗೋಸ್ಕರ "ಈ ವ್ಯವಸ್ಥೆಯು ಎಲ್ಲಿಯವರೆಗೆ ಇರುವುದಾಗಿದೆ?" ಎಂಬ ಪ್ರಶ್ನೆಯು ಮುಖ್ಯವಲ್ಲ, ಆದರೆ "ಇದು ಪರಲೋಕ ದಿಂದ ಬಂದಿದೆಯೋ ಅಥವಾ ಮನುಷ್ಯರಿಂದ ಬಂದಿದೆಯೋ?" ಎಂಬುದಾಗಿದೆ (ಮತ್ತಾಯ 21:25).

ಲಾರ್ಡ್ಸ್ ಚರ್ಚಿನ ನಂಬಿಗಸ್ತ ಸಭೆಯವರು ನಿರಾಶರಾಗಿ "ಸಾಂಪ್ರದಾಯಿಕ ಚರ್ಚು ಗಳು" ಮತ್ತು ಅವರು ನಂಬುವಂಥದ್ದು ಮತ್ತು ಅವರು ಮಾಡುವ "ಸಾಂಪ್ರದಾಯಿಕ ರೀತಿಯ" ಬಗೆಗೆ ಸೂಚಿಸಿದಾಗ ನಾನು ಕ್ಲೇಶಕ್ಕೀಡಾದೆನು. ಈ ಚರ್ಚುಗಳು ಮಾಡುವಂಥದ್ದು "ಸಂಪ್ರದಾಯಿಕ" ವಾಗಿರುವದು ಎಂದು ಪ್ರತಿಯೊಂದಕ್ಕೂ ಪಟ್ಟಿಯನ್ನು ಹಚ್ಚುವ ಯತ್ನವು ನಂಬಿಕೆಗಾಗಿ ಅವರು ಏನು ಮಾಡುತ್ತಾರೆ ಮತ್ತು ನ್ಯಾಯತೀರ್ಪಿನ ವಿಷಯದಲ್ಲಿ ಅವರು ಏನು ಮಾಡಿದರು ಎಂಬುದರ ಮಧ್ಯೆ ಅಲ್ಪ ವ್ಯತ್ಯಾಸವನ್ನು ಮಾಡುವುದಾಗಿದೆ.

ಪ್ರಾಧ್ಯಾಪಕರ ಗುಂಪು ಒಟ್ಟಾಗಿ ಚರ್ಚಿನಲ್ಲಿ ತೊಂದರೆಗೊಳಿಸುವಂತವುಗಳ ಹಿಂದಿರುವ ಪ್ರತಿಯೊಂದು ವಿಷಯವನ್ನು ಎಲ್ಲವುಗಳು ಕೇವಲ ವಾದ ಅಭಿಪ್ರಾಯದ ಸಂಗತಿಗಳು ಮತ್ತು ಮಹತ್ವವಾದವುಗಳು ಯಾವವೂ ಇಲ್ಲ ಎಂದು ಸೂಚಿಸುತ್ತಿರುವುದನ್ನು ನಾನು ಕೇಳಿದನು. ಹಿಂದೆ ನೋಡುವಾಗ, ಆದರೆ ಚರ್ಚಿನಲ್ಲಿ ನಡೆದ ಕೆಲ ಸಂಘರ್ಷಗಳು ಅನವಶ್ಯಕ. ಆದರೆ ಸಭೆಯು ಎದುರಿಸಿದ ಪ್ರತಿಯೊಂದು ಸಂಘರ್ಷಗಳು ವಿಷಯಗಳು ಮಹತ್ವವಲ್ಲವೋ? ಆದಿ ಕ್ರೈಸ್ತರು ಯೆಹೂದತ್ವ ಮತ್ತು ನಾಸ್ತಿಕತ್ವ ಎಂಬ ವಿಷಯಗಳು ಸಭೆಯಲ್ಲಿ ಉದ್ಭವಿಸಿದಾಗ ಅವುಗಳನ್ನು ಕ್ರೈಸ್ತರು ಮೊಟಕುಗೊಳಿಸಿದ್ದೇ ಆದರೆ ಲೇಖಕರು ಹೇಗೆ ಪ್ರತಿಕ್ರಯಿಸುತ್ತಿದ್ದರು?

ಇದನ್ನು ನಾವು ಒಪ್ಪಿಕೊಳ್ಳುವಾ: ಮಾನವ ನಿರ್ಮಿತ ಸಂಪ್ರದಾಯಗಳು ಇತರರ ಮೇಲೆ ಕಟ್ಟಲ್ಪಟ್ಟಾಗ ಅವು ಹೊರಯಾಗುತ್ತವೆ. ಹಳೆಯ ಕಾಲದವರೆಂಬ ಒಂದೇ ಕಾರಣದಿಂದ ನಾವು ಒಮ್ಮಿಂದೊಮ್ಮಲೆ ಯಾವುದೇ ನಂಬಿಕೆಯನ್ನಾಗಲಿ ಅಥವಾ ಅಭ್ಯಾಸವನ್ನಾಗಾಲಿ "ಸಾಂಪ್ರದಾಯವೆಂದು" ವರ್ಗೀಕರಿಸಬಾರದು ಎನ್ನುವುದನ್ನೂ ಸಹ ನಾವು ಒಪ್ಪಿಕೊಳ್ಳುವಾ.

ದೇವರ ಆಜ್ಞೆಗಳು ಮತ್ತು ಮಾನವನ ಸಂಪ್ರದಾಯಗಳ ಮಧ್ಯೆ ಹೇಗೆ ವರ್ಗೀಕರಿಸಬೇಕು ಎಂಬ ಮುಖ್ಯ ಪ್ರಶ್ನೆಯನ್ನು ನಾನು ಹಿಂದೆ ಹೇಳಿದ್ದೆ. ಆ ಪ್ರಶ್ನೆಗೆ ಉತ್ತರವನ್ನು ನೀವು ತಿಳಿದಿದ್ದೀರಿ, ಅದು ಈ ಪ್ರಸಂಗದಲ್ಲಿ ಈಗಾಗಲೇ ಹಲವು ಬಾರಿ ಸೂಚಿತವಾದದ್ದೂ ಆಗಿದೆ: ನಾವು ನಂಬುವ, ಬೋಧಿಸುವ, ಮತ್ತು ಮಾಡುವ ಪ್ರತಿಯೊಂದು *ದೇವವಾಕ್ಯವು ಬೋಧಿಸುವ ಬೆಳಕಿನಲ್ಲಿ ಪರಿಶೋಧಿಸಲ್ಪಡಬೇಕು.* ಇಲ್ಲಿನ ಪ್ರಶ್ನೆಯು "ಇದನ್ನು ನಾವು ಹೇಗೆ ಯಾವಾಗಲೂ ಮಾಡುತ್ತೇವೆ" ಎಂಬುದಲ್ಲ, ಇಲ್ಲಿನ ಪ್ರಶ್ನೆಯು ನಿಶ್ಚಿತವಾಗಿ "ನಾವು ಇದನ್ನು ಹೇಗೆ ಮಾಡಲು ಬಯಸುತ್ತೇವೆ" ಎಂಬುದು ಅಲ್ಲ, ಇಲ್ಲಿನ ಪ್ರಶ್ನೆಯು "ದೇವರು ತನ್ನ ಚಿತ್ತವನ್ನು ಪ್ರಕಟಿಸುವಲ್ಲಿ ಏನನ್ನು ಬೋಧಿಸುವವನಾಗಿದ್ದಾನೆ" ಎಂಬುದೇ ಆಗಿದೆ (ನೋಡಿರಿ ಅಪೊಸ್ತಲರ ಕೃತ್ಯಗಳು 17:11). ಯೇಸುವಿನ ಪಾರಿಭಾಷಿಕ ಕೋಶವನ್ನು ನಾವು ತೆಗೆದುಕೊಳ್ಳುವಾ (ಮತ್ತಾಯ 21:25); ಒಂದು ಸಿದ್ಧಾಂತ ಅಥವಾ ಅಭ್ಯಾಸವು "ಪರಲೋಕದಿಂದ" ಇದ್ದುದ್ದಾದರೆ ಇದು ಪ್ರತಿಯೊಬ್ಬ ಕ್ರೈಸ್ತನಿಗೂ ಕಟ್ಟಲ್ಪಟ್ಟದ್ದಾಗಿದೆ. ಇದು "ಮಾನವರಿಂದ" ಬಂದಿದ್ದಾದರೆ ಇತರರ ಮೇಲೆ ಹೊರೆಸುವ ದೋಷದಲ್ಲಿ ನಾವು ಸಿಕ್ಕಿಕೊಳ್ಳಬಾರದು.

ಇದಕ್ಕೆ ಉತ್ತರವನ್ನು ಕೊಡುತ್ತಾ, ಯಾವುದು "ಸಂಪ್ರದಾಯ" ಮತ್ತು ಯಾವುದು ಅಲ್ಲ ಎಂಬ ತಂಟೆಗೆ ನಾನು ಉತ್ತರವನ್ನು ಕೊಟ್ಟಿದ್ದೇನಲ್ಲವಾ? ಕೇಳಲ್ಪಟ್ಟ ಪ್ರತಿಯೊಂದು ಪ್ರಶ್ನೆಗೆ ನಾನು ಉತ್ತರಿಸಿದ್ದೆನಾ? ಇಲ್ಲ ಮತ್ತು ಇಲ್ಲ. ಕ್ರೈಸ್ತರ ಜೊತೆ ಇರುವ ವಿಪರೀತವಾದ

ವಿಚಾರಗಳನ್ನು ದೂರವಿರಿಸುವುದು ನನ್ನ ಉದ್ದೇಶವಾಗಿದೆ. ನಮ್ಮ ದೂಷಿಸದಿರೋಣ. ಅದೇ ಸಮಯದಲ್ಲಿ, ಸುಮಾರು ವರ್ಷದಿಂದ ಇರುವವುಗಳು ಎಂಬ ಕಾರಣಕ್ಕಾಗಿ ಧಾರ್ಮಿಕ ಬೋಧನೆಗಳನ್ನು ಅಥವಾ ಅಭ್ಯಾಸಗಳನ್ನು ಅಥವಾ "ಸಂಪ್ರದಾಯಗಳನ್ನು" ತೆಗೆದು ಹಾಕದಿರೋಣ. ಏನೇ ಆಗಲಿ, ಹೊಸ ಒಡಂಬಡಿಕೆಯು ಶತಮಾನಗಳಿಂದ ಅಸ್ತಿತ್ವದಲ್ಲಿದೆ. ಯಾವುದೇ ಧರ್ಮದ ಬೋಧನೆಯನ್ನು ಅಥವಾ ಅಭ್ಯಾಸವನ್ನು ಒಪ್ಪಿಕೊಳ್ಳುವದು ಅಥವಾ ಹೊಸ ಒಡಂಬಡಿಕೆಯು ಶತಮಾನಗಳಿಂದ ಅಸ್ತಿತ್ವದಲ್ಲಿದೆ. ಯಾವುದೇ ಧರ್ಮದ ಬೋಧನೆಯನ್ನು ಅಥವಾ ಅಭ್ಯಾಸವನ್ನು ಒಪ್ಪಿಕೊಳ್ಳುವದು ಅಥವಾ ತಿರಸ್ಕರಿಸುವದು ನಮ್ಮ ಮಟ್ಟಕ್ಕನುಗುಣವಾಗಿ ದೇವರ ವಾಕ್ಯದ ಬೋಧನೆಯನ್ನು ಮಾಡುವದಕ್ಕೋಸ್ಕರವಾದದ್ದು ಎಂದು ನಾವು ಪರಿಗಣಿಸುವವರಾಗಿರೋಣ.

ಅನೇಕ ವರ್ಷಗಳ ಹಿಂದೆ ಯೆಹೋಶುವನಿಗೆ ದೇವರಿಂದ ಆತನಿಗೋಸ್ಕರವಾಗಿ ಈ ಸಂದೇಶವನ್ನು ಕೊಡಲ್ಪಟ್ಟಿತು: "ಸ್ಥಿರಚಿತ್ತನಾಗಿರು, ಪೂರ್ಣಧೈರ್ಯದಿಂದಿರು, ಅದನ್ನು ಬಿಟ್ಟು ಎಡಕ್ಕಾದರೂ ಬಲಕ್ಕಾದರೂ ಹೋಗಬೇಡ. ಆಗ ನೀನು ಎಲ್ಲಿ ಹೋದರೂ ಕೃತಾರ್ಥನಾಗುವಿ" (ಯೆಹೋಶುವ 1:7; ಇದನ್ನು ಸಹ ನೋಡಿರಿ 23:6). ದೇವರಿಗೆ ಹೊಂದಿಕೊಂಡಿಲ್ಲದವರ (ಮಾನವ ನಿರ್ಮಿತ ಸಂಪ್ರದಾಯಗಳು) ಕಡೆಗೆ ನಾವು ಆತುಕೊಂಡಿರುವಂತಿರುವದು "ಎಡಕ್ಕೆ" ತಿರಗುವದು ಎಂದು ಮತ್ತು "ಬಲಕ್ಕೆ ತಿರುಗುವದು" ಆಗಿದೆ. ದೇವರಿಗೆ ಹೊಂದಿಕೊಂಡಿರುವುದನ್ನು ಬಿಟ್ಟುಬಿಡುವದನ್ನು (ಆತನು ಪ್ರಕಟಿಸಿದ ಆತನ ಚಿತ್ತ) ನಾವು ಯೋಚಿಸಬಹುದು. ನಮ್ಮ ವಿಪರೀತವಾದ ವಿಚಾರಗಳನ್ನು ದೂರವಿರಿಸುವಂತೆ ಹೃದಯಗಳನ್ನು ನಾವು ಸರಿಯಾಗಿ ಇರಿಸಿಕೊಳ್ಳುವಾ. ಯೇಸುವಿನ ಹೊಸ ಒಡಂಬಡಿಕೆಯ ಬೋಧನೆ ಯನ್ನು "ಎಲ್ಲರಿಗೂ ಸಮ್ಮತವಾದ" ರೀತಿಯಲ್ಲಿ ಮಾಡುವುದಕ್ಕೆ ನಿರ್ಧರಿಸುವಾ!

ಆ ವಿಚಾರವನ್ನು ನಾವು ಈಗ ಮುಕ್ತಾಯಗೊಳಿಸುವಾ ಆದರೆ ಕ್ರಿಸ್ತನು ತನ್ನ ಚರ್ಚೆಯನ್ನು ಇನ್ನೂ ಮುಗಿಸಿಲ್ಲ. ಮಾನವನ ಸಂಪ್ರದಾಯದ ಮೇಲೆ ಕನಿಷ್ಟ ಪಕ್ಷ ಇನ್ನೂ ಒಂದು ವಿಷಯವನ್ನು ಆತನು ಹೊಂದಿದ್ದಾನೆ. ಈ ಸತ್ಯವು ಸ್ಪಷ್ಟವಾಗಿಲ್ಲ ಆದರೆ ಹೇಗೋ ಮಹತ್ವ ವಾದದ್ದಾಗಿದೆ. ಹಿಂದಿನ ಎರಡು ಶ್ರೇಣಿಗಳು ಅದಕ್ಕಿಂತಲೂ ಹೆಚ್ಚಾದ ಆತ್ಮಶೋಧಕಗಳಂತೆ ಇರುವವುಗಳಿಗಾಗಿ ಇವು ಅವಶ್ಯವಾದವುಗಳೂ ಆಗಿವೆ.

## ಸಂಪ್ರದಾಯಗಳು ಅಸಮರ್ಪಕ ಮಹತ್ವವನ್ನು ಪಡೆದಾಗ (ಮತ್ತಾಯ 15:10-20ಣಿ ಮಾರ್ಕ 7:14-23)

ಯೇಸು ಮತ್ತು ಫರಿಸಾಯರ ಮಧ್ಯದ ವರ್ಗಾವಣೆಯು ಖಾಸಗಿಯಾಗಿರಲಿಲ್ಲ. ಕಲ್ಲು ಹೃದಯದ ನಾಯಕರ ಮುಂದೆ ತನ್ನನ್ನು ಮತ್ತು ತನ್ನ ಶಿಷ್ಯರನ್ನು ಸಮರ್ಥಿಸಿಕೊಳ್ಳುವುದರಲ್ಲಿ ಯೇಸು ಆಸಕ್ತಿಯುಳ್ಳವನಾಗಿರಲಿಲ್ಲ, ಆದರೆ ಆತನ ಕೇಳುಗರು ಆತನ ವಿವರಣೆಗೆ ಯೋಗ್ಯರಾಗಿದ್ದರು ಎಂದು ಆತನು ಯೋಚಿಸಿದನು. ಮಾರ್ಕನು ಅಲ್ಲಿ ಉದ್ಭವಿಸಿದ ಮೂಲಭೂತ ವಿಷಯದ ಮೇಲೆ ಆತನು ಬೋಧಿಸಿದ ಪ್ರಸಂಗವನ್ನು ಒಂದೇ ವಚನದಲ್ಲಿ ಸಂಕ್ಷಿಪ್ತಿಕರಿಸಿದ್ದಾನೆ:

> ಆ ಮೇಲೆ ಯೇಸು ಜನರ ಗುಂಪನ್ನು ತಿರುಗಿ ಹತ್ತಿರಕ್ಕೆ ಕರೆದು ಅವರಿಗೆ ಎಲ್ಲರೂ ಕಿವಿಗೊಟ್ಟು ನನ್ನ ಮಾತನ್ನು ಕೇಳಿರಿ, ತಿಳುಕೊಳ್ಳಿರಿ, ಹೊರಗಿನಿಂದ ಮನುಷ್ಯನೊಳಕ್ಕೆ ಹೋಗಿ ಅವನನ್ನು ಹೊಲೆಮಾಡುವಂಥದ್ದು ಒಂದು ಇಲ್ಲ; ಆದರೆ ಮನುಷ್ಯನೊಳಗಿಂದ ಹೊರಡುವವುಗಳೇ ಮನುಷ್ಯನನ್ನು ಹೊಲೆಮಾಡುವವುಗಳಾಗಿವೆ (ಮಾರ್ಕ 7:14, 15) ಅಂದನು.

ಇತರ ಸಂಗತಿಗಳೆಲ್ಲವುಗಳಲ್ಲಿ, ಪ್ರತಿ ಊಟದ ಮೊದಲು ಶುದ್ಧಮಾಡಿಕೊಳ್ಳುವದಕ್ಕೆ ಸಂಬಂಧಿಸಿದಂತೆ ಮಾನವ ನಿರ್ಮಿತ ನಿಯಮಗಳ ತರ್ಕಿಕವಲ್ಲದವುಗಳು ಎಂದು ಯೇಸು ಬೋಧಿಸುತ್ತಿದ್ದನು. ನಿಜದಲ್ಲಿ, ಆತನನ್ನು ಹೊಲೆ ಮಾಡುವಂಥದ್ದು, ಕೈತೊಳಕೊಳ್ಳದೇ ಮಾಡಲ್ಪಡುವ[12] ಊಟವನ್ನು ಒಳಗೊಂಡಿದ್ದು ಅದು ಮನುಷ್ಯನ ಒಳಗೆ ಹೋಗುವಂಥದ್ದಲ್ಲ (ಮತ್ತಾಯ 15:20). ಬದಲಾಗಿ, ಆತನಿಂದ ಯಾವದು ಹೊರಬರುವದೋ ಅದು ಆತನನ್ನು ಹೊಲೆ ಮಾಡುವುದು ಆಗಿದೆ ಅದು ಆ ವ್ಯಕ್ತಿ ಮಾತುಗಳು ಮತ್ತು ಆತನ ಕ್ರಿಯೆಗಳು.

ಕ್ರಿಸ್ತನ ಹೇಳಿಕೆಯು ಧಾರ್ಮಿಕ ಶುದ್ಧಾಚಾರದ ತಕ್ಷಣದ ಪ್ರಶ್ನೆಯನ್ನು ಮೀರಿದ ಅರ್ಥಗಳಾಗಿವೆ. ಯೇಸು "ತಿನ್ನುವ ಪದಾರ್ಥಗಳೆಲ್ಲಾ ಶುದ್ಧವೆಂದು ಸೂಚಿಸಿದನು."[13] ಎಂದು ಯೇಸು ಹೇಳಿದಂತಹ ಒಂದು ಸಮಾರೋಪಣೆಯನ್ನು ಮಾರ್ಕನು ಸೂಚಿಸಿದ್ದಾನೆ (ಮಾರ್ಕ 7:19). ಕರ್ತನ ಮಾತುಗಳು ಆತನ ಕೇಳುಗರಿಗೆ ಎಷ್ಟು ಮಹತ್ವದ್ದು ಎಂದು ಶ್ಲಾಘಿಸುವದು ಹೊಸ ಒಡಂಬಡಿಕೆಯ ಬೋಧನೆಯೊಂದಿಗೆ ಚಿರಪರಿಚಿತರಾಗಿರುವ ನಮ್ಮಂತವರಿಗೆ ಕಷ್ಟವಾದದ್ದಾಗಿದೆ. ಯೆಹೂದಿಗಳು ಯಾವುದನ್ನು ತಿನ್ನಬೇಕು ಮತ್ತು ಯಾವುದನ್ನು ತಿನ್ನಬಾರದು ಎಂಬುದಕ್ಕೆ ಇದ್ದ ಧರ್ಮಶಾಸ್ತ್ರದ ಸೂಚನೆಗಳು (ಯಾಜಕಕಾಂಡ 11) ಬಾಲ್ಯಾರಭ್ಯದಿಂದ ಅವರ ಮೇಲೆ ಪ್ರಭಾವಗೊಳಿಸುತ್ತಾ ಇದ್ದವು (ನೋಡಿರಿ ಅಪೊಸ್ತಲರ ಕೃತ್ಯಗಳು 10:14). ಕ್ರಿಸ್ತನು ತನ್ನ ಶಿಷ್ಯರೊಂದಿಗೆ ಏಕಾಂತವಾಗಿರುವಾಗ, ಪೇತ್ರನು ಆತನಿಗೆ, "ಈ ಸಾಮ್ಯದ ಅರ್ಥವನ್ನು ನಮಗೂ ಹೇಳು" (ಮತ್ತಾಯ 15:15) ಎಂದಾಗ ಆತನು ಹೇಳಿದ ಮಾತುಗಳು ಬಲು ಬೆಚ್ಚಿಬೀಳಿಸುವಂತವುಗಳಾಗಿವೆ. ಆ ಹೇಳಿಕೆಯನ್ನು ಅಕ್ಷರಶಃ ತೆಗೆದುಕೊಳ್ಳಲಾಗದು ಎಂದು ಪೇತ್ರನು ಯೋಚಿಸಿದ್ದನ್ನು "ಸಾಮ್ಯ" ಪದದ ಬಳಕೆಯು ಸೂಚಿಸುವುದಾಗಿದೆ![14]

ಬಹುಶಃ ಯೇಸು ತನ್ನ ತಲೆಯನ್ನಾಡಿಸಿ "ನಿಮಗೂ ಅಷ್ಟು ಬುದ್ಧಿಯಿಲ್ಲವೇ?" ಎಂದು ಹೇಳಿದನು (ಮಾರ್ಕ 7:18). ಜನಜಂಗುಳಿಯು ಅರ್ಥಮಾಡಿಕೊಳ್ಳುವಲ್ಲಿ ವಿಫಲವಾದದ್ದರಿಂದ ಆತನು ಆಘಾತಕ್ಕೊಳಗಾಗಲಿಲ್ಲ, ಆದರೆ ತನ್ನ ಅಪೊಸ್ತಲರಿಗೆ ಶ್ರೇಷ್ಟವಾದ ಒಳನೋಟವಿದೆ ಎಂದು ಆತನು ಸ್ಪಷ್ಟವಾಗಿ ಆಶಿಸಿದ್ದನು. ಅದಲ್ಲದೆ, ಆತನು ತಾಳ್ಮೆಯಿಂದ "ಹೊರಗಿನಿಂದ ಮನುಷ್ಯನೊಳಕ್ಕೆ ಹೋಗುವಂಥದ್ದು ಅವನ ಹೃದಯವನ್ನು ಸೇರದೆ ಹೊಟ್ಟೆಯಲ್ಲಿ ಸೇರಿ ಬಹಿರ್ದೇಶಕ್ಕೆ ಹೋಗುವುದರಿಂದ ಅವನನ್ನು ಹೊಲೆಮಾಡಲಾರದೆಂದು ನಿಮಗೆ ತಿಳಿಯಲಿಲ್ಲವೋ ಎಂದು ಹೇಳಿದನು" (ಮಾರ್ಕ 7:18, 19). ಇನ್ನೊಂದು ಮಾತಿನಲ್ಲಿ ಉಣ್ಣುವದು ಮತ್ತು ಹೊರಹಾಕುವದು ಸ್ವಾಭಾವಿಕ ಪ್ರಕ್ರಿಯೆಯಾದದ್ದರಿಂದ ಅದು ಮಾನವನ ನೈತಿಕ ಅಂಶಕ್ಕೆ ಏನೂ ಸಂಬಂಧಿಸಿಲ್ಲ.

ಎಚ್ಚರಿಕೆಯ ಮಾತು ಕ್ರಮದಲ್ಲಿ ಇರುವುದಾಗಿದೆ. ಆರ್. ಸಿ. ಫೋಸ್ಟರ್ ಈ ರೀತಿ ಬರೆಯುತ್ತಾರೆ, "ಇದೊಂದು ಸ್ವನಾಶಕದಂತಹ ಸಂಗತಿಗಳ ತತ್ವಕ್ಕೆ ಅನ್ವಯಿಸುವಂತಹ ಸಂಪೂರ್ಣವಾದ ದುಷ್ಟತನದ ಪ್ರಯತ್ನವಾಗಿದ್ದು, ಮಾದಕ ಪೇಯದಂತಹ ಅಥವಾ ವಿಷದ ಪ್ರಕಾರದಂತೆ ಇದ್ದಿರಬಹುದು."[15] ಸ್ವಲ್ಪ ದ್ರವ್ಯವು ಬಾಯಲ್ಲಿ ಪ್ರವೇಶಿಸಿದೊಡನೆಯೇ ಹಾನಿಯನ್ನು ಮಾಡಬಹುದಾಗಿದೆ. ಪೋಷಕರು ತಮ್ಮ ಮಕ್ಕಳಿಗೆ ಹಲವು ಬಾರಿ "ನಿಮ್ಮ ಬಾಯಿಂದ ದೂರವಿಡಿ" ಎಂದು ಹೇಳುತ್ತಾರಲ್ಲವೇ! ದೇಹವು "ದೇವರ ಆಲಯವಾಗಿದೆ" (1 ಕೊರಿಂಥ 3:16, 17; 6:19); ಆಲಯಕ್ಕೆ ಹಾನಿಯನ್ನುಂಟು ಮಾಡುವ ಯಾವುದೇ ಆಗಲಿ ಅದು ಬಿಡಲ್ಪಡಬೇಕು. ಹೇಗೋ, ಯಾವುದು ಹಾನಿಕಾರಕ್ಕೆ ಸಂಭವನೀಯ ವಾಗಿರುತ್ತದೆಯೋ ಅದನ್ನು ಮನದಲ್ಲಿ ಇಟ್ಟುಕೊಂಡಿರಲಿಲ್ಲ; ಆತನ ಕಾಳಜಿಯು ಯೆಹೂದಿಗಳು "ಅಶುದ್ಧ" ಎಂದು ಪರಿಗಣಿಸುವ ಪುಷ್ಟಿದಾಯಕ, ಆರೋಗ್ಯಕರ ಆಹಾರದೆಡೆಗೆ ಇತ್ತು.

ಆತನು ತನ್ನ ವಿವರಣೆಯನ್ನು ಮುಂದುವರೆಸಿದನು:

ಮನುಷ್ಯನೊಳಗಿಂದ ಹೊರಡುವಂಥದೇ ಮನುಷ್ಯನನ್ನು ಹೊಲೆಮಾಡುವದು;

ಒಳಗಿನಿಂದ ಅಂದರೆ ಮನುಷ್ಯರ ಮನಸ್ಸಿನೊಳಗಿಂದ ಸೂಳೆಗಾರಿಕೆ ಕಳ್ಳತನ ಕೊಲೆ ಹಾದರ ದ್ರವ್ಯಾಶೆ ಕೆಡುಕುತನ ಮೋಸ ಬಂಡತನ ಹೊಟ್ಟೇ ಕಿಚ್ಚು ಬೈಗಳು ಸೊಕ್ಕು ಬುದ್ದಿಗೇಡಿತನ ಇವೇ ಮೊದಲಾದವುಗಳು ಕೆಟ್ಟ ಆಲೋಚನೆಗಳು ಹೊರಡುತ್ತವೆ. ಈ ಕೆಟ್ಟ ವಿಷಯಗಳೆಲ್ಲಾ ಒಳಗಿನಿಂದ ಹೊರಟು ಮನುಷ್ಯನನ್ನು ಹೊಲೆ ಮಾಡುತ್ತವೆ ಅಂದನು (ಮಾರ್ಕ 7:20-23).

**ಆಗಿದ್ದ ಹೃದಯ ಸಮಸ್ಯೆ**

ಪಟ್ಟಿಮಾಡಲ್ಪಟ್ಟ "ಕೆಟ್ಟ ಸಂಗತಿಗಳ" ಬಗೆಗೆ ಹೆಚ್ಚಾಗಿ ಹೇಳಲ್ಪಡಬಹುದು, ಆದರೆ ನಾನು "ಹೃದಯ" ಎಂಬ ಪದದ ಮೇಲೆ ಕೇಂದ್ರಿಕರಿಸಲು ಬಯಸುತ್ತೇನೆ. ಫರಿಸಾಯರ ಮೂಲ ಸಮಸ್ಯೆಯು *ಹೃದಯದ* ಸಮಸ್ಯೆಯಾಗಿದೆ ಎಂದು ಈ ಕಥೆಯುದ್ದಕ್ಕೂ, ಯೇಸು ಒತ್ತಿ ಹೇಳಿದ್ದಾನೆ. ಈ ಹಿಂದೆ, ಆತನು ಇಂಥ ಹೇಳಿಕೆಯನ್ನು ನೀಡಿದನು ಯಾಕೆಂದರೆ ಅವರು ದೇವರನ್ನು ತಮ್ಮ *ಹೃದಯದಿಂದ* ಆರಾಧಿಸುತ್ತಿರಲಿಲ್ಲ (ಮತ್ತಾಯ 15:8; ಮಾರ್ಕ 7:6). ಇಲ್ಲಿ ಇದಕ್ಕಾಗಿಯೇ ಅವರ ದೃಷ್ಟಿಯು ಹೊರಗಿನವುಗಳ ಮೇಲೆ ಇರುವುದಾಗಿದೆ, ಅದು ಮನುಷ್ಯನಿಂದ ಹೊರಹೋಗುವುದಾಗಿದೆ, ಅವರು ಇನ್ನೊಂದೆಡೆಗೆ ಗಮನಿಸಿದಾಗ, *ಹೃದಯವು* ಒಳ್ಳೆಯದು ಮತ್ತು ಕೆಟ್ಟದ್ದು ಎರಡೂ ಅಂಶಗಳ ಮೂಲವಾಗಿರುತ್ತದೆ ಎಂದು ಹೇಳಿದನು.

ಸಂಪ್ರದಾಯವು ಕೆಟ್ಟದ್ದಾಗಿಯೋ ಇಲ್ಲವೋ ಎಂಬುದನ್ನು ಪರಿಗಣಿಸುವುದಕ್ಕೋಸ್ಕರ ಮೂರನೆಯ ತತ್ವವನ್ನು ಇದು ಸೂಚಿಸುವುದಾಗಿದೆ: *ಒಂದು ಸಂಪ್ರದಾಯವು ಅಸಮರ್ಥಕವಾದ ಮಹತ್ವವನ್ನು ಪಡಕೊಂಡಾಗ ಅದು ಕೆಟ್ಟದ್ದಾಗಿರುತ್ತದೆ* - ದೇವರ ಆಜ್ಞೆಗೆ ವಿಧೇಯರಾಗುವುದಕ್ಕಾಗಿ ನಾವು ಕೊಡಬೇಕಾದ ಮಹತ್ವವನ್ನು ನಾವು ಸಂಪ್ರದಾಯಗಳನ್ನು ಅನುಸರಿಸಬೇಕೆಂಬ ನಿರ್ಧಾರಗಳಿಂದ ಅದು ಮಂಕಾಗಿ ಬಿಡುತ್ತದೆ. ತಮ್ಮ ಸಂಪ್ರದಾಯಗಳೊಂದಿಗೆ ಫರಿಸಾಯರ ತಪ್ಪಾಗಿ ಗ್ರಹಿಸುವಿಕೆಯು ದೇವರ ಆಜ್ಞೆಗಳನ್ನು *ಅಲಕ್ಷಿಸುವುದಕ್ಕೆ* ಕಾರಣವಾಗಿವೆ ಎಂದು ಕ್ರಿಸ್ತನು ಹೇಳಿದನು (ಮಾರ್ಕ 7:8).

**ಈಗಿನ ಒಂದು ಹೃದಯ ಸಮಸ್ಯೆ?**

ಹಿಂದೆ ಹೇಳಿದಂತೆ ಸಂಪ್ರದಾಯಕ್ಕೆ ಅಸಮರ್ಪಕವಾದ ಮಹತ್ವ ಕೊಡುವುದಕ್ಕೆ ಸಂಬಂಧಿಸಿಂದತಿರುವದು ಸಂಪ್ರದಾಯವು ಕೆಟ್ಟದ್ದಾಗಿದೆಯೋ ಇಲ್ಲವೋ ಎಂಬುದನ್ನು ಅರಿಯುವದಕ್ಕೋಸ್ಕರದ ಅಳತೆಗೋಲಿಗಿಂತ ಹೆಚ್ಚು ಸೂಕ್ಷ್ಮವಾದದ್ದಾಗಿದೆ. ಈ ಪರೀಕ್ಷೆಯು ವಾಸ್ತವವಾದದ್ದಕ್ಕಿಂತಲೂ ಹೆಚ್ಚು ವಿಷಯಾತ್ಮಕವಾಗಿದೆ; ಅದಲ್ಲದೆ ಇದು ಮಹತ್ವದ್ದು ಆಗಿದೆ. ಮೂರನೆಯ ಅಪಾಯವು ನಾವು ಚರ್ಚಿಸಿದ ಇತರೆ ಎರಡಕ್ಕಿಂತಲೂ ಹೆಚ್ಚಾದಂತೆ, ಅಥವಾ ಹೆಚ್ಚಾಗಿ ಇರುವದು, ಖಚಿತವಾಗಿದೆ. ನಾನು ಮತ್ತು ನೀನು ದೇವರ ಆಜ್ಞೆಗಳಿಗೆ ಬದಲಿಯಾದಂಥ ಸಂಪ್ರದಾಯವನ್ನು ಹೊಂದಿಲ್ಲ. ಸಂಪ್ರದಾಯವನ್ನು ಕೈಕೊಳ್ಳದಿರುವುದಕ್ಕಾಗಿ ನಾವು ಇತರರನ್ನು ಖಂಡಿಸಲಾರೆವು. ಇದು ಇನ್ನೂ ಸಾಧ್ಯವಿದೆ. ಹೇಗೋ, ನಮ್ಮ ಸಂಪ್ರದಾಯಗಳು ನಮಗೆ ಬಲು ಮಹತ್ವದ್ದಾಗಿ ಪರಿಣಮಿಸಿದ್ದರಿಂದ ಜನರು ಅದನ್ನು ಅಲಕ್ಷಿಸಿದಾಗ ಜನರು ದೇವರ ಆಜ್ಞೆಯನ್ನು ಮೀರಿದಾಗ ನಾವು ಮಾಡುವುದಕ್ಕಿಂತ ಹೆಚ್ಚಾಗಿ ವ್ಯಾಕುಲರಾಗುತ್ತೇವೆ.

"ಜನರು ಹೇಗೆ ಎಂಬುದು ನನಗೆ ಗೊತ್ತು" ಎಂದು ತಲೆದೂಗುತ್ತಾ ಯೋಚಿಸುತ್ತಿದ್ದೀಯಲ್ಲವೇ? ಒಂದು ಎಚ್ಚರಿಕೆಯ ಮಾತು ಹೀಗಿದೆ: ಇತರರಿಗಾಗಿ ಅನ್ವಯಿಸುವ ತತ್ವವು ಇದಲ್ಲ. ಇದು ಸ್ವಂತಕ್ಕಾಗಿ ಅನ್ವಯಿಸುವ ತತ್ವವಾಗಿದೆ. ಇನ್ನೊಬ್ಬ ಮನುಷ್ಯನ ಹೃದಯವನ್ನು ನಾನು ಅರಿಯೆನು. ಮಾನವನ ಸಂಪ್ರದಾಯಗಳು ಮೌಖಿಕವಾಗಿ ಆತನಿಗೆ ಮಹತ್ವದ್ದಾಗಿರಬಹುದು ಎಂದು ನಾನು *ಯೋಚಿಸಬಹುದು,* ಆದರೆ ನಾನು ಅದನ್ನು ಅರಿಯೆನು. ಇಬ್ಬರು ವ್ಯಕ್ತಿಗಳು ಅದೇ ತರದ ಸಂಪ್ರದಾಯಗಳನ್ನು ಆಚರಿಸುವುದಾದರೆ, ಒಬ್ಬನು ಯೋಗ್ಯವಾದ

ಅವಲೋಕನದೊಂದಿಗೆ ಇರುವವನು ಮತ್ತು ಇನ್ನೊಬ್ಬನು ದುಷ್ಟಸ್ವಭಾವದ ಅವಲೋಕನ ದೊಂದಿಗೆ ಇರುವವನು. ಈ ವಿಷಯದಲ್ಲಿ ನಾವು ತೀರ್ಪುಮಾಡುವ ತಪ್ಪಿನಲ್ಲಿರುವದು ಬೇಡ (ಮತ್ತಾಯ 7:1, 2; ರೋಮಾಪುರ 2:1); ನಮ್ಮಲ್ಲಿ ಪ್ರತಿಯೊಬ್ಬರೂ ತಮ್ಮನ್ನು ತಾವೇ ತೀರ್ಪುಮಾಡಿಕೊಳ್ಳಲಿ.

## ಮುಕ್ತಾಯ

ಯೇಸುವಿನ "ಸಂಪ್ರದಾಯದ ಬೋಧನೆಯ" ಮೇಲಿನ ಚರ್ಚೆಯನ್ನು ನಾವು ಮುಗಿಸುತ್ತಿದ್ದಂತೆ, ಹಿಂದಿನದೊಂದು ವಾಕ್ಯವು ನನ್ನ ಮನದಲ್ಲಿ ಮೂಡುತ್ತಿದೆ. ನಂಬಿಕೆಯ, ಎಲ್ಲಾ ವಿಷಯದಲ್ಲಿ ಐಕ್ಯತೆಯು; ಅಭಿಪ್ರಾಯ ವಿಷಯದಲ್ಲಿ ಸ್ವಾತಂತ್ರ್ಯ; "ಇನ್ನಿತರ ಎಲ್ಲಾ ಸಂಗತಿಗಳಲ್ಲಿ, ದಾನ (ಅಥವಾ ಪ್ರೀತಿ)." ಈ ಭಾಗದ ಈ ಉದ್ದೇಶವು ಧಾರ್ಮಿಕವಾಗಿ ನಾವು ಏನನ್ನು ಮಾಡುತ್ತೇವೆ ಅಥವಾ ಬೋಧಿಸುತ್ತೇವೆ ಎಂದು ನಮಗೆ ಅವಶ್ಯವಿರುವ ಮೂರು ಪ್ರಶ್ನೆಯನ್ನು ಸೂಚಿಸುವುದಾಗಿದೆ.

*"ನಂಬಿಕೆಯ, ಎಲ್ಲಾ ವಿಷಯದಲ್ಲಿ ಐಕ್ಯತೆ." "ನಂಬಿಕೆಯ ವಿಷಯದಲ್ಲಿ"* ಎಂಬುದು ದೇವರು ತನ್ನ ವಾಕ್ಯದಲ್ಲಿ ಮಾತನಾಡಿದಂಥದ್ದೇ ಆಗಿದೆ (ರೋಮಾಪುರ 10:17). ಅಂಥ ಸಂಗತಿಗಳಲ್ಲಿ ನಾವು ಒಂದಾಗಿರುವದು ಅವಶ್ಯವಾಗಿದೆ (1 ಕೊರಿಂಥ 1:10). *"ನಾವು ಏನನ್ನು ಮಾಡುತ್ತೇವೆ ಅಥವಾ ಬೋಧಿಸುತ್ತೇವೆಯೋ ಅದರ ಬಗೆಗೆ ನಮಗೆ ಸತ್ಯವೇದಿ ಯಾಗಿ ಅಧಿಕಾರವಿದೆಯೋ?"* ಎಂಬ ಮೊದಲ ಪ್ರಶ್ನೆಯನ್ನು ನಾವು ಕೇಳಿಕೊಳ್ಳಲು ಸೂಚಿಸುವುದಾಗಿದೆ. ಯಾವುದೇ ಅಭ್ಯಾಸಕ್ಕೆ ಸಂಬಂಧಿಸಿದಂತ ಮಹತ್ವದ ಪ್ರಶ್ನೆಯು "ಎಷ್ಟರ ಮಟ್ಟಿಗೆ ಈ ರೀತಿಯಲ್ಲಿ ಮಾಡಲ್ಪಟ್ಟಿದೆ?" ಆದರೆ "ಇದರ ಹುಟ್ಟು ಎಲ್ಲಿ?" ಎಂಬುದೇ.

*"ಒಂದು ಅಭಿಪ್ರಾಯದ ವಿಷಯ."* ಅಭಿಪ್ರಾಯ ವಿಷಯದಲ್ಲಿ ಸ್ವಾತಂತ್ರ್ಯ ಎಂಬುದು ದೇವರು ತನ್ನ ವಾಕ್ಯದಲ್ಲಿ ಮಾತನಾಡಿದಂಥದ್ದೇ ಆಗಿದೆ ಇದು ವೈಯಕ್ತಿಕ ತೀರ್ಪನ್ನು ಒಳಗೊಳ್ಳುತ್ತದೆ. ಇಂಥ ವಿಷಯಗಳಲ್ಲಿ, ನಾವು ನಮ್ಮ ಅಭಿಪ್ರಾಯಗಳನ್ನು ಇತರರ ಮೇಲೆ ಹೊರಿಸಲಾರದಂಥದ್ದು ಆಗಿದ್ದು "ಸ್ವಾತಂತ್ರದ" ಒಂದು ಸೂತ್ರವಾಗಿದೆ.[16] ಇದು ನಿರಂತರ ಹೃದಯ - ಹುಡುಕುವಿಕೆಗೋಸ್ಕರವಾಗಿರುವಂತಹ ಕರೆಯಾಗಿದ್ದು: *"ಸಮಯದ ಕಾರಣದಿಂದ ಅದೇ ತರದ ಪ್ರಾಮುಖ್ಯತೆಯಿಂದ ನನ್ನ ಮನದಲ್ಲಿ ತೆಗೆದುಕೊಳ್ಳಲ್ಪಡುವ ಕಾರಣದಿಂದಾಗಿ ಒಂದು ಆಜ್ಞೆಯನ್ನು ಹೊತ್ತುಕೊಳ್ಳುವ ಒಂದು ಯಥೋಚಿತ ಮಾರ್ಗವಾದಂಥದ್ದಾಗಿದೆಯಾ?"*

*"ಇನ್ನಿತರ ಎಲ್ಲಾ ಸಂಗತಿಗಳಲ್ಲಿ, ದಾನ [ಅಥವಾ ಪ್ರೀತಿ]."* ನಮ್ಮ ಜೊತೆ ಕ್ರೈಸ್ತರು ನ್ಯಾಯ ತೀರ್ಪಿನ ವಿಷಯದಲ್ಲಿ ಅಸಂತುಷ್ಟರಾಗಿದ್ದಾಗಲೂ, ನಾವು ಅವರನ್ನು ಇನ್ನೂ ಪ್ರೀತಿಸಬೇಕು (ಯೋಹಾನ 13:35; ರೋಮಾಪುರ 12:10). ಮೂಲ ತತ್ವವು ಅಲಕ್ಷಿಸಲ್ಪಟ್ಟಾಗ ಸಹೋದರರು ವಿಮುಖರಾಗುತ್ತಾರೆ ಮತ್ತು ಸಭೆಯು ವಿಭಾಗಿಸಲ್ಪಡುತ್ತದೆ. "*ದೇವರ ವಾಕ್ಯವನ್ನು ಹಾಳುಮಾಡದ ಮತ್ತು ನಿಯಮದಂತೆ ನಮ್ಮನ್ನು ಕಟ್ಟಿಹಾಕದ ಹಾನಿರಹಿತವಾ ದಂಥ ಸಂಪ್ರದಾಯಕ್ಕೆ ಸಂಬಂಧಿಸಿದಂತೆ ಕ್ರಿಸ್ತನ ಆತ್ಮವನ್ನು ನಾನು ಹೊಂದಿದ್ದೇನೆಯಾ?*" ಎಂಬ ಈ ಪ್ರಶ್ನೆಯನ್ನು ಕೇಳುವದು ಪ್ರತಿಯೊಬ್ಬರಿಗೂ ಅವಶ್ಯವಿದೆ. ಕೇವಲ ನಾವು ಯಾವಾಗಲೂ ಇದನ್ನು ಕೆಲವನ್ನು ನಿಶ್ಚಿತ ರೀತಿಯಲ್ಲಿಯೇ ಮಾಡುತ್ತಿದ್ದೆವು ಎಂಬ ಕಾರಣದಿಂದ ಮಾಡಲು ಸೂಚಿಸುವದು ಮೂರ್ಖತನವಾಗಿದೆ. ಕೇವಲ ಭಿನ್ನವಾಗಿದೆ ಎಂಬ ಕಾರಣಕ್ಕಾಗಿ ಇನ್ನೊಂದು ರೀತಿಯಲ್ಲಿ ಸಂಗತಿಗಳನ್ನು ಮಾಡಲು ಸೂಚಿಸುವುದೂ ಅಷ್ಟೇ ಮೂರ್ಖತನ ವಾಗಿದೆ[17] ದಿನದ ಕ್ರಮದ ಪ್ರಕಾರ ಅಭಿಪ್ರಾಯದ, ಪ್ರೀತಿಯ, ಸಮಾಲೋಚನೆಯು, ಮತ್ತು ಸೂಕ್ಷ್ಮತೆಯ ಸಂಗತಿಯಲ್ಲಿ ನಿರಾಕರಣೆಯು ಇರುವುದಾಗಿದೆ.

ಸಂಪ್ರದಾಯದ ವಿಷಯವು ಸಂಕೀರ್ಣವಾಗಿದೆ. ಮೂಲ ತತ್ವವು ವ್ಯಾಖ್ಯಾನಿಸಲು

ಕಷ್ಟವಾದದ್ದಾಗಿದೆ, ಆದರೆ ಅವುಗಳನ್ನು ಅನ್ವಯಿಸುವದು ಕಠಿಣವದದ್ದಾಗಿದೆ. ಆ ವಿಷಯವು ಅಮೂಖ್ಯವಾಗಿದೆ ಅಥವಾ ನಮಗೆ ಅರಿತುಕೊಳ್ಳಲು ಪ್ರಯತ್ನಿಸುವದು ಅವಶ್ಯವಿಲ್ಲದಿರುವುದರಿಂದ ಮತ್ತು ಮತ್ತಾಯ 15 ಮತ್ತು ಮಾರ್ಕ 7ರಲ್ಲಿ ಯೇಸುವಿನಿಂದ ಕಲಿಸಲ್ಪಟ್ಟ ತತ್ವಗಳಿಗೆ ವಿಧೇಯರಾಗುವದೆಂಬ ಇದರ ಅರ್ಥವಲ್ಲ. ಬದಲಾಗಿ, ಇದರ ಅರ್ಥವು ಯಾವನೊಬ್ಬನೂ ಪ್ರತಿಪಾದಿಸಿದಂತೆ ಎಲ್ಲಾ ಉತ್ತರಗಳನ್ನು ಹೊಂದಲು ಬಲುಧೈರ್ಯಶಾಲಿಯಾಗಿರಬೇಕು ಎಂದಾಗಿದೆ. ಇದರ ಅರ್ಥವು ಒಬ್ಬರ ಜೊತೆಗೊಬ್ಬರು ಸಮಾಧಾನದಿಂದಿರುವದು ಎಂದಾಗಿದೆ (ಎಫೆಸ 4:2).

ಸಂಪ್ರದಾಯದ ವಿಷಯದಂತೆ ಪ್ರತಿಯೊಂದು ಪ್ರಸ್ತಾಪವು ಅಷ್ಟೊದು ಕಷ್ಟಮಯವಾಗಿಲ್ಲ ಎನ್ನುವುದಕ್ಕೆ ನಾನು ಕೃತಜ್ಞನಾಗಿದ್ದೇನೆ. ಉದಾಹರಣೆಗಾಗಿ, ಪಾಪದಿಂದ ರಕ್ಷಣೆಯ ವಿಷಯವನ್ನು ಪರಿಗಣಿಸಿರಿ. ಕರ್ತನ ಮಾರ್ಗವು ಸರಳಾವಾಗಿರುವಂಥದ್ದು ಎಂಥ ಅದ್ಭುತಕಾರಿಯಾದದ್ದಲ್ಲವೇ? ಯೇಸು ನಮ್ಮನ್ನು ಪ್ರೀತಿಸಿದನು ಮತ್ತು ನಮ್ಮ ಪಾಪಗಳಿಗಾಗಿ ಸತ್ತನು (ಯೋಹಾನ 3:16; 1 ಕೊರಿಂಥ 15:1-3) ಮತ್ತು ಈಗ ನಾವು ಪ್ರೀತಿಯ ವಿಧೇಯತೆಯ ಮೂಲಕ ಪ್ರತಿಕ್ರಿಯಿಸಬೇಕಾಗಿದೆ (ಯೋಹಾನ 3:16; ಮಾರ್ಕ 16:16; ಅಪೊಸ್ತಲರ ಕೃತ್ಯಗಳು 22:16). ಸಂಪ್ರದಾಯದ ಬಗ್ಗೆ ಎಲ್ಲ ಉತ್ತರಗಳು ನಮ್ಮದೆ ಇಲ್ಲ, ಆದರೆ "ರಕ್ಷಿಸಲ್ಪಡಲು ನಾನು ಏನನ್ನು ಮಾಡಬೇಕು?" ಎಂಬ ಬಲು ಮುಖ್ಯವಾದ ಪ್ರಶ್ನೆಗೆ ಉತ್ತರವನ್ನು ನಾವು ತಿಳಿದಿರಬೇಕು. (ಅಭ್ಯಾಸಿರಿ ಅಪೊಸ್ತಲರ ಕೃತ್ಯಗಳು 2:37, 38; 8:36-38; 6:30-33.) ನೀನು ಇಡೀ ಜೀವನದ ಸಮಯದಲ್ಲಿ ಸಂಪ್ರದಾಯದ ಪ್ರಶ್ನೆಯೊಂದಿಗೆ ಹೊರಾಡುತ್ತ ಕಳೆದಿರಬಹುದು, ಆದರೆ ಆತನ ಚಿತ್ತದಂತೆ ಮಾಡಲು ಇನ್ನೊಂದು ಕ್ಷಣಕ್ಕಾಗಿ ಕಾಯುವ ಧೈರ್ಯವಿದೆಯಾ. ಆತನಿಗೆ ವಿಧೇಯರಾಗುವ ಅವಶ್ಯಕತೆಯು ನಿನಗಿದೆ, ಈಗಲೇ ಮಾಡಲಾರೆಯಾ!

---

ಟಿಪ್ಪಣೆಗಳು

[1]"ಸಂಪ್ರದಾಯವು ಕೆಟ್ಟದಾದಾಗ" ಎಂಬ ಹಿಂದಿನ ಪ್ರಸಂಗಕ್ಕೆ ಹಿಂತಿರುಗಬೇಕು ಮತ್ತು ಎರಡನೆಯ ಭಾಗವನ್ನು ಪುನರಾವಲೋಕಿಸಬೇಕೆಂದು ನೀವು ಬಯಸಬಹುದು. [2]ಹಿಂದಿನ ಪ್ರಸಂಗದ ವಿಷಯವಾದಂತಹ "ಸಂಪ್ರದಾಯ" ಎಂಬ ಪದವನ್ನು ಈ ಪ್ರಸಂಗದ ಮುಖ್ಯ ಶೀರ್ಷಿಕೆಯು ಮಾನವರ ಸಂಪ್ರದಾಯಗಳನ್ನು ಸೂಚಿಸುವುದಾಗಿದೆ. [3]ಇಂಗ್ಲೀಷ್ ಭಾಷೆ ಎಂಬುದು "ಅಹಂಕಾರ" ಎಂಬ ಅರ್ಥವನ್ನು ಕೊಡುತ್ತದೆ. ಬೈಬಲಿನಲ್ಲಿರುವ ಬಲು ಸಾಮಾನ್ಯವಾದ ಅರ್ಥವುಳ್ಳ ಪದವು "ಖಾಲಿ, ನಿಷ್ಪ್ರಯೋಜಕ, ಬೆಲೆಯಿಲ್ಲದ್ದು" ಎಂಬುದಾಗಿದೆ (ಪ್ರಸಂಗಿ 1:14ರಲ್ಲಿ ಬಳಸಲಾದ ಪದಗಳ ವ್ಯತ್ಯಾಸವೆನೆಂಬುದನ್ನು ಗಮನಿಸಿರಿ). [4]ನಾನು ಇರುವ ಸ್ಥಳದಲ್ಲಿ ಇದನ್ನು ಉದಾಹರಿಸಲು ನನಗೆ ತಿಳಿದಿರುವ ಒಂದೇ ಮಾರ್ಗವು ಪರಿಸ್ಥಿತಿಯನ್ನು ವರ್ಣಿಸುವ ಮೂಲಕವೇ. ನೀನೂ ಸಹ ನಿಮ್ಮ ಸ್ಥಳದಲ್ಲಿ ಅನ್ವಯವಾಗುವಂತೆ ಈ ಉದಾಹರಣೆಯನ್ನು ನೀನು ಉಪಯೋಗಿಸಿಕೋ. [5]ನನ್ನ ಕೇಳುಗರು ಬದಲಿ ವ್ಯವಸ್ಥೆಯನ್ನು ನೋಡುವವರಾಗಿದ್ದಾರೆ ಎಂದು ನಾನು ಭಾವಿಸುತ್ತೇನೆ. ನಾನು ಸೂಚಿಸಿದ್ದು ಬೈಬಲ್ಲಿನಲ್ಲಿ ಇಲ್ಲದೆ ಇರುವುದು ಅಲ್ಲ, ಮತ್ತು "ಇಲ್ಲ" ಎಂಬ ಉತ್ತರವು ಪ್ರತಿ ಪ್ರಶ್ನೆಯ ನಂತರ ಅರಿತಿದ್ದೇ ಆಗಿದೆ. [6]ಬ್ರಿಟೀಷ್ ಹಿನ್ನಲೆ ಹೊಂದಿದ ಸಭೆಯು ಈ ತರದ ಭಾನುವಾರ ಮುಂಜಾನೆಯ ಆರಾಧನೆಯನ್ನು ಹೊಂದಿರುವ ಸಾಧ್ಯತೆಯು ಇದೆ. [7]ಭಾನುವಾರ ರಾತ್ರಿ ಮನೆಗಳಲ್ಲಿ ಇರುವ ಆರಾಧನೆಗಳ ಬಗ್ಗೆ ವಿವೇಕವನ್ನು ಹೊಂದಿರುವುದರ ಬಗೆಗೆ ಕೆಲವರ ಪ್ರಶ್ನಿಸಬಹುದು, ಆದರೆ ಅದು ಪ್ರಯೋಜಕತೆಯ ಪ್ರಶ್ನೆಯಾಗಿದೆ ಹೊರತು ಬೈಬಲ್ಲಿನದಲ್ಲ. [8]ಸಭೆಯು ಮೇಲ್ವಿಚಾರಣೆ ಮಾಡುತ್ತಿರುವಂತಹ ಹಿರಿಯರ ಜವಾಬ್ದಾರಿಯು ಈ ಚರ್ಚೆಯ ಒಂದು ಅಂಶವಾಗಿದೆ ಅವರ ಜವಾಬ್ದಾರಿಯನ್ನು ಸಂಪೂರ್ಣಗೊಳಿಸುವಂತೆ, ಅವರು ಸಭೆಗೆ ಪರಿಣಾಮ ಬೀರುವಂತಹ ನಿರ್ಧಾರವನ್ನು ಅವರು ಮಾಡಿದರು. ಇತರ ಸಭೆಯು ತಮ್ಮ ನಿರ್ಧಾರದ ಜೊತೆ ನಿಲ್ಲುವವರಾಗುವದು ಅವಶ್ಯವಿಲ್ಲ ಎಂಬುದನ್ನು ಅವರು ಅರಿತುಕೊಳ್ಳಲೇಬೇಕು. (ಅದು ಸ್ಥಳೀಯ ಅಧಿಕಾರದ ತತ್ವ.)

ಭಿನ್ನತೆಯು ನಂಬಿಕೆಯ ವಿಷಯದಲ್ಲಿ ಮತ್ತು ಅಭಿಪ್ರಾಯದ ವಿಷಯದಲ್ಲಿ ಇರುವುದಾಗಿದೆ ಎಂದು ಮತ್ತೊಂದು ಸಾರಿ, ನಾನು ಹೇಳುವವನಾಗಿದ್ದೇನೆ. [9]ರಾತ್ರಿ ಭೋಜನದ ನಂತರ ಕಾಣಿಕೆಯನ್ನು ತೆಗೆದುಕೊಳ್ಳುವುದು ಯೋಗ್ಯವಾಗಿರುವದು ಎಂದಾಗ್ಯೂ ಕಾಣಿಕೆ ಕೊಡಿಸುವದು ಕರ್ತನ ಭೋಜನದ ಭಾಗವಲ್ಲ ಎಂದು ಜನರು ತಿಳಿಯುವದು ಅವಶ್ಯವಾಗಿದೆ ಎಂಬುದು ಆಕೆಯ ತರ್ಕವಾಗಿತ್ತು. [10]ನಾವು ಮಾಡಬೇಕೆಂದು ಅವಳು ಅಪೇಕ್ಷಿಸುತ್ತಿದ್ದಾಗ ನಾವು ಮಾಡದೇ ಇದ್ದುದರಿಂದ "ಆರಾಧನೆಯ ಕಾರ್ಯವನ್ನು" (ಕಾಣಿಕೆ) ನಾವು ತೆಗೆದುಹಾಕಿದ್ದೇವೆ ಎಂದು ಸಹ ಅವಳು ಯೋಚಿಸಿರಬಹುದು.

[11]"ಸಂಪ್ರದಾಯಿಕ ಕುಟುಂಬ"ದ ವ್ಯವಸ್ಥೆಯು ದೇವರಿಂದಾದುದು ಮತ್ತು ಆದಿಕಾಂಡದ ಮೊದಲಿನ ಅಧ್ಯಾಯದ ಸುತ್ತಲೂ ಇರುವುದರಿಂದಲೂ ಆಗಿದೆ. "ಸಂಪ್ರದಾಯಿಕ ಕುಟುಂಬವು" ಸಲಿಂಗ ಮದುವೆಯ ಮತ್ತು ದೇವರ ವಾಕ್ಯದ ಇತರೆ ಬದಲಾವಣೆಗಳನ್ನು ಪ್ರತಿಪಾದಿಸುವಂತರ ದಾಳಿಯ ಅಡಿಯಲ್ಲಿ ಇದೆ ("ಜೊತೆಯಾಗಿ ಜೀವಿಸುವ" ವ್ಯವಸ್ಥೆಯ ಜೊತೆ ಮದುವೆಯಾಗುವದು ಇದರಂಥವು). [12]ವೀಕ್ಷಕರಲ್ಲಿ ಮಕ್ಕಳು ಉಪಸ್ಥಿತವಿದ್ದರೆ, ಕೆಲ ಸಂಗತಿಗಳಲ್ಲಿ ಅನೇಕ ತಾಯಂದಿರು ಊಟಕ್ಕೆ ಮೊದಲು ಕೈಗಳನ್ನು ತೊಳೆಯಲು ಹೇಳುವಂತದ್ದು ಯೇಸುವಿನ ಮಾತುಗಳಿಗೂ ಈ ಉದಾಹರಣೆಗೆ ಯಾವುದೇ ಸಂದರ್ಭವಿಲ್ಲದಂತಹವುಗಳನ್ನು ನೀವು ಒತ್ತಿ ಹೇಳಲು ಬಯಸಬಹುದು. ತಾಯಂದಿರು ಸ್ವಚ್ಛತೆಯ ಬಗೆಗೆ ಕಾಳಜಿಯುಳ್ಳವರಾಗಿರುತ್ತಾರೆ ಯೇಸು ಆಚರಣೆಯ ಬಗೆಗೆ ಹೇಳುತ್ತಿದ್ದಾನೆ. [13]ಆ ಸಮಯದಲ್ಲಿ ಶಿಷ್ಯರು ಇದನ್ನು ಒಂದು ವಿಷಯವಾಗಿ ಅರಿತುಕೊಂಡರು ಎಂದು ಮಾರ್ಕನ ಮಾತುಗಳು ಅರ್ಥೈಸುವುದಿಲ್ಲ. ಮಾರ್ಕನು ಮೂವತ್ತು ಅದಕ್ಕಿಂತ ಹೆಚ್ಚು ವರ್ಷಗಳವರೆಗೆ ಬರೆದನು, ಹಿಂತಿರುಗಿ ನೋಡಿದಾಗ, ಈ ಸತ್ಯವು ಕ್ರಿಸ್ತನು ಹೇಳಿದಂತಹ ತಪ್ಪಿಸಿಕೊಳ್ಳಲಾರದ ಸಮಾರೋಪಣೆಯಾಗಿದೆ ಎಂದು ದೈವೀಕಪ್ರೇರಣೆಯುಳ್ಳ ಜನರು ಕಂಡರು. [14]ಮಾರ್ಕ 7:14, 15 ವಿಷಯದ ಜೊತೆ ಪೇತ್ರನು ಅಪೊಸ್ತಲರ ಕೃತ್ಯಗಳು 10ರ ಘಟನೆಯ ತನಕನಿರಂತರವಾಗಿ ಹೋರಾಡಿದನು. [15]R. C. Foster, *Studies in the Life of Christ* (Grand Rapids, Mich.: Baker Book House, 1971), 669. [16]ನಮ್ಮ ಸ್ವತಂತ್ರ್ಯವನ್ನು ಚರ್ಚನ್ನು ಮತ್ತು ಇತರೆ ಕ್ರೈಸ್ತರನ್ನು ನೋವುಂಟು ಮಾಡುವ ರೀತಿಯಲ್ಲಿ ಬಳಸಬಾರದು ಎಂದು ಸತ್ಯವೇದವು ಬೋಧಿಸುವುದಾಗಿದೆ (ನೋಡಿ 1 ಕೊರಿಂಥ 8:9), ಆದರೆ ಕ್ರಿಸ್ತೀಯ ಸ್ವಾತಂತ್ರ್ಯದ ಆಳವಾದ ಚರ್ಚೆಯು ಇದಕ್ಕಿಂತ ಮೀರಿದ್ದಾಗಿದ್ದು ಆ ಮಂಡನೆಯನ್ನು ನಾವು ಸಂಪೂರ್ಣವಾ ಗಿಸಬಹುದಾಗಿದೆ. [17]ಕೆಲವ್ಯಕ್ತಿಗಳು ಮತ್ತು ಸಭೆಯವರು ಪ್ರತ್ಯಕ್ಷವಾಗಿ ಅವರು ಮಾಡಿದಂತೆ ವಿಭಿನ್ನವಾಗಿದೆ ಎಂದು ಪರಿಗಣಿಸಿದ್ದಾರೆ ಅವರ ಮಾರ್ಗಗಳು ಒಳ್ಳೆಯವು ಎಂಬುದಕ್ಕೆ ಸ್ಪಷ್ಟವಾದ ಪುರಾವೆಗಳು ಇವೆ ಎಂಬ ಕಾರಣಕ್ಕಲ್ಲ, ಆದರೆ ಅವರು ಕಲ್ಪಿಸಿಕೊಂಡಂತಹ "ಸಂಪ್ರದಾಯಿಕ ಚರ್ಚಿನ" ವಿರುದ್ಧ ಅವರು ದಂಗೆ ಎದ್ದ ಕಾರಣದಿಂದಲೇ. ಇದು ಆತ್ಮೀಕ "ಹದಿಹರೆಯದ ನಡವಳಿಕೆ" ಆಗಿದೆ. ವಿಭಿನ್ನವಾಗಿ ಜೀವಿಸ ಬೇಕೆಂಬ ಕಾರಣಕ್ಕಾಗಿ ವಿಭಿನ್ನವಾಗಿರುವುದಕ್ಕೆ ಯಾವ ಬೆಲೆಯೂ ಇಲ್ಲ.